# ಎಕ್ಸ್ ಟ್ವಿಟರ್‌ನ ಹೊಸ ಲೋಗೊ

ಟ್ವಿಟರ್ ಪ್ಲಾಟ್‌ಫಾರ್ಮ್‌ಗೆ ಅರ್ಥಪೂರ್ಣ ಸಂಕೇತದಂತಿದ್ದ ಹಾರುವ ಹಕ್ಕಿಯ ಲೋಗೊವನ್ನು ಕಡೆಗೂ ಬದಲಿಸಿದ ಎಲಾನ್ ಮಸ್ಕ್, ಆ ಜಾಗಕ್ಕೆ 'ಎಕ್ಸ್'(X) ಎಂಬ ಲೋಗೊ ತಂದುಕೂರಿಸಿದ್ದಾರೆ. ಸಮಾಜದ ಅಂಕುಡೊಂಕುಗಳ ಬಗ್ಗೆ ಟ್ವೀಟ್ ಮೂಲಕ ಕುಟುಕುತ್ತಿದ್ದ ರೀತಿಗೆ ಪೂರಕವಾಗಿದ್ದ ಹಾರುವ ಹಕ್ಕಿಯ ಲೋಗೊವೀಗ ಅಲ್ಲಿಂದ ಹಾರಿದೆ.

ಕೆಲ ತಿಂಗಳ ಹಿಂದೆ ಇದೇ ಹಕ್ಕಿಯ ಲೋಗೊ ಜಾಗಕ್ಕೆ ಬೊಗಳುವ ನಾಯಿಯನ್ನು ತಂದು ಕೂರಿಸಿ ಅಣುಕಿಸಿದ್ದ ಎಲಾನ್ ಮಸ್ಕ್, 'ಟ್ವಿಟರ್ ಎಕ್ಸ್' ಆವೃತ್ತಿಯಡಿಯೇ ಕಂಪನಿಯ ಭವಿಷ್ಯದ ಸೇವೆಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಟ್ವಿಟರ್ ಎಕ್ಸ್ ರೀಬ್ರ್ಯಾಂಡ್ ಆಗಿದ್ದು, ಹಲವು ವರ್ಷಗಳಿಂದ ಬಳಕೆದಾರರು ನೋಡುತ್ತಿರುವ ಟ್ವಿಟರ್‌ನ ನೀಲಿ ಪಕ್ಷಿ ಲೋಗೊ ಬದಲಾವಣೆ ಆಗಿದೆ. ಈ ಲೋಗೊಗೆ ಗುಡ್ ಬೈ ಹೇಳಲಾಗಿದೆ' ಎಂದಿದ್ದಾರೆ.

ಆದಾಗ್ಯೂ ಕಂಪನಿಯ ವೆಬ್‌ಸೈಟ್‌ನ ಹಲವೆಡೆ ಹಕ್ಕಿಯ ಲೋಗೊ ಇನ್ನೂ ಕೆಲಕಾಲ ಹಾಗೆಯೇ ಉಳಿದುಕೊಳ್ಳಲಿದೆ. ಈ ಬಗ್ಗೆಯೂ ಪ್ರತಿಕ್ರಿಯಿಸಿರುವ ಎಲಾನ್, 'ಶೀಘ್ರದಲ್ಲೇ ನಾವು ಟ್ವಿಟರ್ ಬ್ರ್ಯಾಂಡ್‌ಗೆ ಮತ್ತು ಕ್ರಮೇಣ ಎಲ್ಲಾ ಪಕ್ಷಿಗಳಿಗೆ ವಿದಾಯ ಹೇಳುತ್ತೇವೆ' ಎಂದು ಟ್ವೀಟ್ ಮಾಡಿದ್ದಾರೆ. ಅಲ್ಲದೆ, ಮುಂದಿನ ದಿನಗಳಲ್ಲಿ ರೀಬ್ರ್ಯಾಂಡ್ ಆಗಿ ಎಕ್ಸ್ – ಎವ್ರಿಥಿಂಗ್ ಆ್ಯಪ್ (X Everything App) ಭವಿಷ್ಯದ ಅಪ್ಲಿಕೇಷನ್ ಆಗಿ ಹೊರಹೊಮ್ಮಲಿದೆ' ಎಂದಿದ್ದಾರೆ.

'ಎಕ್ಸ್ ಎವ್ರಿಥಿಂಗ್' ರೀಬ್ರ್ಯಾಂಡ್ ಕಾರಣಕ್ಕೆ ಈಗಾಗಲೇ ದೊಡ್ಡ ಮಟ್ಟದ ಬದಲಾವಣೆ ಆಗಿದ್ದು, ಡೊಮೈನ್ X.com ಬಳಕೆದಾರರನ್ನು ಟ್ವಿಟರ್‌ಗೆ ರೀಡೈರೆಕ್ಟ್ ಮಾಡಲಾಗುತ್ತಿದೆ. ಇನ್ನು ಲೋಗೊ ಬದಲಾವಣೆ ಕುರಿತಂತೆ ಪ್ರತಿಕ್ರಿಯಿಸಿರುವ ಟ್ವಿಟರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಲಿಂಡಾ ಯಕ್ಕಾರಿನೊ, 'ಇದು ದೊಡ್ಡ ಮಟ್ಟದ ಪ್ರಭಾವ ಬೀರಲು ನಮಗೆ ಸಿಕ್ಕ ಎರಡನೆಯ ಅವಕಾಶ. ಜಗತ್ತಿನಲ್ಲಿ ಟ್ವಿಟರ್ ದೊಡ್ಡ ಮಟ್ಟದ ಪ್ರಭಾವ ಬೀರಿದ್ದು, ಈ ವೇದಿಕೆಯ ಸಂವಹನ ವಿಧಾನದಲ್ಲಿ ಬದಲಾವಣೆ ಅತ್ಯಗತ್ಯ' ಎಂದಿದ್ದಾರೆ.

ಸಾರ್ವಜನಿಕ ಕಂಪನಿಯಾಗಿದ್ದ ಟ್ವಿಟರ್ ಈಗ ಎಕ್ಸ್ ಕಾರ್ಪೊರೇಷನ್‌ನೊಂದಿಗೆ ವಿಲೀನಗೊಂಡಿದ್ದು, ಖಾಸಗಿ ಕಂಪನಿಯಾಗಿ ಕಾರ್ಯನಿರ್ವಹಿಸಲಿದೆ. ಇದರ ಕೇಂದ್ರ ಕಚೇರಿಯು ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿದೆ. ಎಲಾನ್ ಮಸ್ಕ್ ಒಡೆತನದ ಬಾಹ್ಯಾಕಾಶ ಸಂಸ್ಥೆಯಾದ 'ಸ್ಪೇಸ್‌ಎಕ್ಸ್'ನಲ್ಲಿರುವ ಎಕ್ಸ್ ಅಕ್ಷರದ ಮಾದರಿಯನ್ನೇ ಟ್ವಿಟರ್‌ಗೂ ಅಳವಡಿಸಿರುವುದು ವಿಶೇಷ. ಇದು ಎಲಾನ್ ಒಡೆತನದ ಎಲ್ಲ ಕಂಪನಿಗಳನ್ನು ಒಂದೇ ವೇದಿಕೆಯಡಿ ತರುವ ಉದ್ದೇಶದ ಮುನ್ನುಡಿಯಾಗಿದೆ.

'ಬದಲಾದ ಟ್ವಿಟರ್ ಲೋಗೊದ ವರ್ಷನ್‌ನಲ್ಲಿ ಅಪರಿಮಿತ ಸಂವಹನ ನಡೆಸಬಹುದಾಗಿದೆ. ಆಡಿಯೊ, ವಿಡಿಯೊ, ಮೆಸೇಜಿಂಗ್, ಪೇಮೆಂಟ್ಸ್/ಬ್ಯಾಂಕಿಂಗ್, ಗೂಡ್ಸ್, ಸರ್ವೀಸ್, ಇತರೆ ಸೇವೆಗಳನ್ನು ಕಂಪನಿಯು ಒದಗಿಸಲಿದೆ. ಕೃತಕ ಬುದ್ಧಿಮತ್ತೆ (AI) ಚಾಲಿತವಾಗಿರಲಿದ್ದು, ಎಲ್ಲಾ ವಿಧದಲ್ಲೂ ಸಂಪರ್ಕಕ್ಕೆ ಅನುಕೂಲವಾಗಲಿದೆ' ಎಂದಿದೆ ಕಂಪನಿ.

# ಸ್ಮಾರ್ಟ್‌ವಾಚ್ ಪಾರ್ಕಿನ್ಸನ್ ದಿಕ್ಸೂಚಿ

'ಫ್ಯಾಷನ್ ಉದ್ದೇಶದಿಂದ ಜನಸಾಮಾನ್ಯರ ಕೈಗೇರಿರುವ ಸ್ಮಾರ್ಟ್‌ವಾಚ್‌ಗಳು ನೋಡುಗರನ್ನು ಸೆಳೆಯುವುದಷ್ಟೇ ಅಲ್ಲದೆ ಆರೋಗ್ಯದ ಮೇಲೂ ನಿಗಾವಹಿಸಲಿವೆ' ಎಂಬ ಕಂಪನಿಗಳ ಮಾತನ್ನು ಅಧ್ಯಯನವೊಂದು ಸಾಬೀತುಪಡಿಸಿದೆ. 'ಪಾರ್ಕಿನ್ಸನ್ ಕಾಯಿಲೆಯ ಬಗ್ಗೆ ಸ್ಮಾರ್ಟ್‌ವಾಚ್ ಬಳಕೆದಾರರಿಗೆ ಮುನ್ಸೂಚನೆಯನ್ನು ನೀಡಲಿದೆ' ಎಂಬ ಅಂಶವನ್ನು ವಿದೇಶಿ ಸಂಶೋಧನಾ ತಂಡವೊಂದು ಪ್ರತಿಪಾದಿಸಿದೆ.



ಬ್ರಿಟನ್‌ನ ಕಾರ್ಡಿಫ್ ವಿಶ್ವವಿದ್ಯಾಲಯವು ಈ ಸಂಶೋಧನೆಯನ್ನು ಕೈಗೊಂಡಿದ್ದು, ಅಧ್ಯಯನಕ್ಕಾಗಿ 1,03,000 ಮಂದಿಯನ್ನು ಸಂಶೋಧನಾ ತಂಡವು ಬಳಸಿಕೊಂಡಿದೆ. ಏಳು ದಿನಗಳವರೆಗೆ ಸ್ಮಾರ್ಟ್‌ವಾಚ್ ಧರಿಸಿದ ಮಾಹಿತಿಯನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದ್ದು, ಅಧ್ಯಯನ ವರದಿಯನ್ನು 'ಜರ್ನಲ್ ನೇಚರ್ ಮೆಡಿಸನ್' ಹಾಗೂ 'ಬಿಬಿಸಿ'ಯೂ ವರದಿ ಮಾಡಿವೆ.

ವರದಿಯ ಪ್ರಕಾರ, 'ಸಂಶೋಧನೆಯಲ್ಲಿ ಪಾಲ್ಗೊಂಡವರು ಬಳಸಿದ ಸ್ಮಾರ್ಟ್‌ವಾಚ್‌ಗಳಿಂದ ಡಾಟಾ ಪಡೆದುಕೊಂಡ ತಂಡವು ಆ ಮಾಹಿತಿಯನ್ನೂ ಅಧ್ಯಯನಕ್ಕೆ ಒಳಪಡಿಸಿದೆ. ಅಧ್ಯಯನದಲ್ಲಿ ಪಾಲ್ಗೊಂಡ ಕೆಲವರಿಗೆ ಭವಿಷ್ಯದಲ್ಲಿ ಪಾರ್ಕಿನ್ಸನ್ ಕಾಯಿಲೆ ಬರುವ ಸಾಧ್ಯತೆ ಇದೆ ಎನ್ನುವುದನ್ನು ಸ್ಮಾರ್ಟ್‌ವಾಚ್‌ಗಳು ಗುರುತಿಸಿದ್ದು, ಆ ಸಂಬಂಧ ಸ್ಮಾರ್ಟ್‌ವಾಚ್ ಬಳಕೆದಾರರಿಗೆ ಮುನ್ಸೂಚನೆಯನ್ನೂ ನೀಡಿವೆ' ಎಂಬುದು ಗೊತ್ತಾಗಿದೆ.

'ಸ್ಮಾರ್ಟ್‌ವಾಚ್‌ಗಳು ನಿಜಕ್ಕೂ ಅಸಾಧ್ಯವಾದ ಸಾಧನಗಳಾಗಿವೆ. ಹೃದಯ ಬಡಿತದ ಪ್ರಮಾಣ, ರಕ್ತದಲ್ಲಿನ ಆಮ್ಲಜನಕ ಪ್ರಮಾಣ, ರಕ್ತದೊತ್ತಡ ಹಾಗೂ ಇತ್ಯಾದಿ ಅಂಶಗಳನ್ನು ಯಾವುದೇ ಲ್ಯಾಬ್ ಪರೀಕ್ಷೆಯಿಲ್ಲದೆ ಗುರುತಿಸುತ್ತವೆ. ಹಾಗೆಯೇ ಪಾರ್ಕಿನ್ಸನ್‌ನಂತಹ ಅಪಾಯಕಾರಿ ಕಾಯಿಲೆ ಬರುವ ಸಾಧ್ಯತೆವುಳ್ಳವರಿಗೆ ಆ ಬಗ್ಗೆ ಹಲವು ವರ್ಷಗಳ ಮುಂಚೆಯೇ ಎಚ್ಚರಿಸಲಿವೆ' ಎಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಜೊತೆಗೆ, ವ್ಯಕ್ತಿಯ ನರಮಂಡಲವನ್ನು ಹಾನಿಯುಂಟು ಮಾಡುವ ಮೊದಲೇ ಅಕ್ಸೆಲೆರೊಮೀಟರ್ ಒಳಗೊಂಡ ಸ್ಮಾರ್ಟ್‌ವಾಚ್‌ಗಳಲ್ಲಿನ ತಂತ್ರಜ್ಞಾನವು ಆ ಬಗ್ಗೆ ಎಚ್ಚರಿಸುತ್ತವೆ. ಸಾಮಾನ್ಯವಾಗಿ ಇಂತಹ ವಿಚಾರವು ಗೊತ್ತಾಗುವುದೇ ಕ್ಲಿನಿಕ್‌ಗಳಲ್ಲಿ ವೈದ್ಯಕೀಯ ಪರೀಕ್ಷೆ ಮಾಡಿದ ಬಳಿಕ.

'ಪಾರ್ಕಿನ್ಸನ್ ಕಾಯಿಲೆಯು ಮೆದುಳಿನ ಕೇಂದ್ರ ನರಮಂಡಲ ವ್ಯವಸ್ಥೆಯನ್ನು ಬಾಧಿಸುತ್ತದೆ. ಇದು ವ್ಯಕ್ತಿಯ ಚಲನವಲನ ನಿರ್ಬಂಧಿಸಿ ದೇಹದಲ್ಲಿ ಕಂಪನ ಸೃಷ್ಟಿಸುತ್ತದೆ. ಕಾಯಿಲೆಯ ಲಕ್ಷಣಗಳು ಗೋಚರವಾಗುವುದೇ ತೀರಾ ನಿಧಾನಗತಿಯಲ್ಲಿ. ಈ ಬಗ್ಗೆ ನಿಗಾವಹಿಸುವ ಸ್ಮಾರ್ಟ್‌ವಾಚ್ ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಯ ಬಗ್ಗೆ ತಿಳಿಸುತ್ತದೆ ಇದು ಪೂರ್ವಭಾವಿ ಪಾರ್ಕಿನ್ಸನ್ ಚಿಕಿತ್ಸೆಗೆ ಸಹಾಯಕಾರಿ' ಎಂದಿದ್ದಾರೆ ಸಂಶೋಧನಾ ತಂಡದ ಸದಸ್ಯ ಡಾ. ಸಿಂಥಿಯಾ ಸ್ಯಾಂಡರ್.